**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಕಡೂರು**

**ಸಿಸಿ. ನಂ. 2767/2022**

ಫಿರ್ಯಾದುದಾರರು : ಶ್ರೀ ಎ.ಸಿ.ರವಿಕುಮಾರ್ ಬಿನ್ ಲೇಟ್ ಚಿಕ್ಕಣ್ಣ,
ವಯಸ್ಸು ಸುಮಾರು 50 ವರ್ಷ, ಕ್ಲಾಸ್.1 ಕನ್ಟ್ರಾಕ್ಟರ್,
ವಾಸಃ ಆದಿಗೆರೆ ಗ್ರಾಮ, ಹಿರೇನಲ್ಲೂರು ಹೋಬಳಿ,
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿ : ಶ್ರೀಮತಿ ಮಮತ ಎಲ್. ಬಿನ್ ಲಿಂಗರಾಜು,
ವಯಸ್ಸು ಸುಮಾರು 38 ವರ್ಷ, ಶಿಕ್ಷಕಿ,
ವಾಸಃ ವಾರ್ಡ್ ನಂ.39, 2 ನೇ ಕ್ರಾಸ್, ಡೋರ್
ನಂ.50, ಜ್ಯೋತಿ ನಗರ, ಮೈಸೂರು,
ಕೆಲಸ ಶಿಕ್ಷಕಿ, ಕನ್ನಿಕಾ ಕಾವೇರಿ ವಿದ್ಯಾ ಸಂಸ್ಥೆ (ರಿ),
ಪ್ರೈಮರಿ ಸ್ಕೂಲ್ ಸೆಕ್ಷನ್, ಹೆಬ್ಬಾಳ, ಫಸ್ಟ್ ಸ್ಟೇಜ್,
ಮೈಸೂರು.

## ಆಪಾದನೆ

ಶ್ರೀ. ಹೆಚ್.ಪಿ ಮೋಹನ್‌ಕುಮಾರ್ ಬಿ.ಎಸ್ಸಿ, ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆರೋಪಣೆ.

ಪಿರ್ಯಾದುದಾರರು ಹಾಗೂ ಆರೋಪಿ ಪರಿಚಯಸ್ಥರಾಗಿದ್ದು, ನೀವು ಪಿರ್ಯಾದುದಾರರಿಂದ ದಿನಾಂಕ 20.02.2022 ರಂದು ರೂ.9,50,000/- (ಒಂಬತ್ತು ಲಕ್ಷದ ಐವತ್ತು ಸಾವಿರ ರೂಪಾಯಿ)ಗಳನ್ನು ಸಾಲವಾಗಿ ಕಡೂರು ತಾಲ್ಲೂಕು ಅಡಿಗೆರೆ ಗ್ರಾಮದಲ್ಲಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ಹಾಗೂ ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸುವ ಸಲುವಾಗಿ ನಿಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೈಸೂರಿನ ಹೆಬ್ಬಾಳ ಶಾಖೆಗೆ ಸೇರಿದ ಎರಡು ಚೆಕ್‌ಗಳ ಸಂಖ್ಯೆ 329562, ದಿನಾಂಕಃ29.03.2022, ರೂ.5,00,000/- (ಐದು ಲಕ್ಷ ರೂಪಾಯಿಗಳು ಮಾತ್ರ) ಮತ್ತು ಚೆಕ್ ಸಂಖ್ಯೆಃ329563, ದಿನಾಂಕಃ29.04.2022, ರೂ.4,50,000/- ( ನಾಲ್ಕು ಲಕ್ಷದ ಐವತ್ತು ಸಾವಿರ ರೂಪಾಯಿ) ಗಳು ಎಂದು ನಮೂದಿಸಿರುವ ಚೆಕ್ಕಗಳನ್ನು ಫಿರ್ಯಾದುದಾರರಿಗೆ ನೀಡಿ ಸದರಿ

ಚೆಕ್ಕುಗಳನ್ನು ದಿ:29.04.2022 ರಂದು ಅಥವಾ ಆ ನಂತರ ನಗಧೀಕರಿಸಿಕೊಳ್ಳ...

ತಿಳಿಸಿರುತ್ತೀರಿ.

ನಿಮ್ಮ ಮಾತಿನಂತೆ ಪಿರ್ಯಾದುದಾರರು ಅವರ ಖಾತೆ ಇರುವ ಐ.ಡಿ.ಎಫ್.ಸಿ. ಫಸ್ಟ್ ಬ್ಯಾಂಕ್ ಲಿಮಿಟೆಡ್, ಕಡೂರು ಶಾಖೆಗೆ ನಗಧೀಕರಣಕ್ಕಾಗಿ ಚೆಕ್ಕಗಳನ್ನು ಸಲ್ಲಿಸಿದಾಗ, " Payment stopped by the drawer" ಎಂಬ ಹಿಂಬರಹದೊಂದಿಗೆ ಸದರಿ ಚೆಕ್ಕುಗಳು ದಿ:12.05.2022 ರಂದು ಅಮಾನ್ಯಗೊಂಡಿರುತ್ತದೆ. ಸದರಿ ವಿಚಾರವಾಗಿ ಫಿರ್ಯಾದುದಾರರು ಆಪಾದಿತರಾದ ನಿಮಗೆ ದಿನಾಂಕ: 25.05.2022 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸು ಕಳುಹಿಸಿದ್ದು, ಸದರಿ ನೋಟೀಸು ನಿಮಗೆ ದಿನಾಂಕ: 27.05.2022 ರಂದು ಜಾರಿಯಾಗಿರುತ್ತದೆ. ತದನಂತರದಲ್ಲಿ ನೀವು ಸಾಲದ ಹಣವನ್ನು ಮರುಪಾವತಿಸುವ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ, ಆದ್ದರಿಂದ ಆಪಾದಿತರಾದ ನೀವು ಫಿರ್ಯಾದುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಚೆಕ್ಕಗಳನ್ನು ನೀಡಿರುವ ಕಾರಣ **ಕಲಂ 138 ವರ್ಗಾವಣೆ ಲಿಖಿತಗಳ ಅಧಿನಿಯಮ** ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆ: 1- ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೇ ?

ಉತ್ತರ: ಅರ್ಥವಾಯಿತು

ಪ್ರಶ್ನೆ: 2- ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪರ ಪ್ರತಿರಕ್ಷಣೆ ಇದೆಯೇ?

ಉತ್ತರ: ತಪ್ಪು ಮಾಡಿಲ್ಲ, ನನ್ನ ಪರ ಪ್ರತಿರಕ್ಷಣೆ ಇರುತ್ತದೆ

*(ದಿ 13.01.2023 ರಂದು ಆರೋಪಿಗೆ ಆಪಾದನೆ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಆತನು ಕೊಟ್ಟ ಹೇಳಿಕೆಗಳನ್ನು ನನ್ನ ಸಮಕ್ಷಮ ಬರೆದುಕೊಂಡು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ)*

13/1/23

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಕಡೂರು.

Mamatha L